ತಾರೀಖು 7ನೆ ಮಾರ್ಚ್ 1907.

ನಂ. 7845—ಸ್ಯಾನಿಟೆರಿ 166-06-4, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ಯನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸೆಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರ್ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.			ತಾಲ್ಲೂಕು.
ದಾಸಕೊಪ್ಪ	...	...	ಸಾಗರ.
ಹೊಸೂರು ಕ್ಯಾಂಪು	..	..	ಶಿಂಸಿ ಸಬ್ ತಾಲ್ಲೂಕು.

ತಾರೀಖು 12ನೆ ಮಾರ್ಚ್ 1907.

ನಂ. 8161—ಸ್ಯಾನಿಟೆರಿ 99-06—6, ಹಾಸನ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕಿನ ಬೇಲೂರಿಗೆ ಶ್ರೀ ಚನ್ನಕೇಶವ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮನ್ ಮಹಾರಾಜರವರ ಸರ್ಕಾರದವರು 1907ನೆಯ ವರ್ಷದ ಮಾರ್ಚ್ 20ನೆ ತಾರೀಖಿನಿಂದ 1907ನೆಯ ವರ್ಷದ ಏಪ್ರಿಲ್ 5ನೆ ತಾರೀಖಿನ ವರೆಗೆ (ಉಭಯ ದಿನಗಳೂ ಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಮೇಲ್ಕಂಡ ರಥೋತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 12ನೆ ಮಾರ್ಚ್ 1907.

ನಂ. 8202—ಸ್ಯಾನಿಟೆರಿ 21-06—92, ಸಮಸ್ತ ಜನರ ತಿಳಿವಳಿಕೆಯ ಬಗ್ಯೆ ಇದರಿಂದ ಪ್ರಸಿದ್ಧಿಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ಸಂತೆ ಮತ್ತು ಉತ್ಸವಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಬರುವುದನ್ನು ನಿಷೇಧಿಸಿರುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟ್.	ತಾರೀಖು. ಇಂದ.	ತಾರೀಖು. ಗೆ.	ಅಧಿಕಾರ.
ಶ್ರೀ ಕೃಷ್ಣರಾಜಗೋಪಾಲಸ್ವಾಮಿ ಪಂಗುಣಿ ಉತ್ಸವ.	ಮನ್ನಾರ್‌ಗುಡಿ.	ಮನ್ನಾರ್‌ಗುಡಿ.	ತಂಜಾವೂರು.	1—3—07	20—3—07 ಉಭಯ ದಿನಗಳೂ ಸೇರಿ.	1ನೆ ಅಸಿಸ್ಟೆಂಟ್ ರೆಸಿಡೆಂಟರವರ 1907ನೆಯ ಇಸವಿ ಮಾರ್ಚ್ 6ನೆ ಮತ್ತು 181ನೆ ನಂಬರ್ ಮೆಮೊ ಪ್ರಕಾರ.
ಶ್ರೀ ದೇವರಾಜ ಸ್ವಾಮಿಯವರ ನಡಭೊವಿ ಉತ್ಸವ.	ಅಯ್ಯಂಗಾರ್ ಕೊಳ.	ಕಂಜೀವರಂ.	ಕಂಜೀವರಂ.	23—4—07	28—4—07 ಉಭಯ ದಿನಗಳೂ ಸೇರಿ.	ಮಾರ್ಚ್ 8ನೆ ಮತ್ತು 205-P ನಂಬರ್ ಮೆಮೊ ಪ್ರಕಾರ.
*ಪಂಗುಣಿ ಉತ್ತರಹಬ್ಬ ಮತ್ತು ದನಗಳ ಸಂತೆ.	ಮೈಲಂ ಮತ್ತು ಅದರ ಸುತ್ತಮುತ್ತಲಿರುವ ಗ್ರಾಮಗಳು.	ತಿಂಡಿವನಂ.	ದಕ್ಷಿಣ ಆರ್ಕಾಡು.	14—3—07	2—4—07 ಉಭಯ ದಿನಗಳೂ ಸೇರಿ.	ಡಿಟೋ 207-P ನಂಬರು ಮೆಮೊ ಪ್ರಕಾರ.
†ಉಚ್ಚಂಗಮ್ಮನ ಹಬ್ಬ.	ಉಚ್ಚಂಗಿದುರ್ಗ.	ಹರಪನಹಳ್ಳಿ.	ಬಳ್ಳಾರಿ.	5—3—07	20—3—07	ಡಿಟೋ 6ನೆ ಮತ್ತು 183-P ಮೆಮೊ ಪ್ರಕಾರ.

ಷರತ್ತುಗಳು.

* ಮೈಲಂನಲ್ಲಿಯೂ ಮತ್ತು ಅದಕ್ಕೆ 15 ಮೈಲಿ ಘಾಸಲೆಯಲ್ಲಿರುವ ಯಾವ ಗ್ರಾಮಗಳಲ್ಲಿಯೂ ದನಗಳ ಸಂತೆಯನ್ನು ನಡಸುವದನ್ನು ನಿಷೇಧಿಸಿದೆ.

†ಈ ಉತ್ಸವಕ್ಕೆ ಯಾತ್ರೆ ಹೋಗುವದನ್ನು ನಿಷೇಧಿಸಿದೆ.